ಜಿಲ್ಲಾ ಪಂಚಾಯತ ಬೆಳಗಾವಿ

ಟೆಲಿಫ್ಯಾಕ್ಸ:0831-2407294

ಯೋಜನಾ ವ್ಯವಸ್ಥಾಪಕರ ಕಾರ್ಯಾಲಯ,
ನಿರ್ಮಲ ಭಾರತ ಅಭಿಯಾನ,
ಜಿಲ್ಲಾ ನೆರವು ಘಟಕ,
ಜಿಲ್ಲಾ ಪಂಚಾಯತ, ಬೆಳಗಾವಿ.
E-mail:tscbgm@gmail.com

ಪತ್ರಸಂ.ಜಿಪಂಬೆ/ಟಿಎಸ್‌ಸಿ/ವಿವ-17/06-07 ದಿನಾಂಕ: 30/06/2014.

**ವಿಷಯ:**ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿ 2014-15 ನೇ ಸಾಲಿನಲ್ಲಿ ಶಾಲಾ ಶೌಚಾಲಯಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**1)ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದ ಮಾರ್ಗಸೂಚಿ ಜುಲೈ-2012

2)ಸರ್ಕಾರದ ಆದೇಶ ಕ್ರ.ಸಂ. ಗ್ರಾಅಪ/ರಾನೀನೈಮಿ/ಸಂ.ಸ್ವ.ಆಂ/120/2009/2013-14 ದಿನಾಂಕ:29-04-2014.

3)ಸರ್ಕಾರದ ಆದೇಶ ಕ್ರ.ಸಂ. ಗ್ರಾಅಪ/ರಾನೀನೈಮಿ/ನಿಭಾಅ/ಎಸ್.ಆರ್.-911/2013-14 ದಿನಾಂಕ:29-04-2014.

4)ಈ ಕಾರ್ಯಾಲಯದ ಆದೇಶ ಸಮಸಂಖ್ಯೆ ದಿನಾಂಕ:22-05-2014.

5)ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರ ಪತ್ರ ದಿನಾಂಕ:04-02-2014.

6)ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕೋಡಿ ಇವರ ಪತ್ರ ದಿನಾಂಕ:02-06-2014.

7)ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿಪಿ/ಎಸ್‌ಡಬ್ಲೂಎಸ್/ಎನ್.ಬಿ.ಎ./ಆರ್‌ಎಫ್‌ಡಿ-05/ 2014-15 ದಿನಾಂಕ:13-06-2014.

**ಪ್ರಸ್ತಾವನೆ:**

ನಿರ್ಮಲ ಭಾರತ ಯೋಜನೆಯಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮೇಲೆ ಓದಲಾದ (2) ಆದೇಶದನ್ವಯ ಕೇಂದ್ರ ಸರ್ಕಾರದ ರೂ. 419.51 ಲಕ್ಷ ಹಾಗೂ ಓದಲಾದ (3) ಆದೇಶದನ್ವಯ ರಾಜ್ಯ ಸರ್ಕಾರದ ರೂ 185.70 ಲಕ್ಷ ಅನುದಾನ ಹೀಗೆ ಒಟ್ಟು ರೂ. 605.21 ಲಕ್ಷ ಅನುದಾನ ಬಿಡುಗಡೆಯಾಗಿದೆ. ಮೇಲೆ ಓದಲಾದ (4) ರ ಈ ಕಾರ್ಯಾಲಯದ ಆದೇಶದಲ್ಲಿ ರೂ.507.835 ಲಕ್ಷ ಅನುದಾನವನ್ನು ವೈಯಕ್ತಿಕ ಶೌಚಾಲಯಗಳ ಪ್ರೋತ್ಸಾಹಧನಕ್ಕಾಗಿ ಬಿಡುಗಡೆ ಮಾಡಲಾಗಿದೆ. ಶಿಲ್ಕು ಉಳಿದ ಅನುದಾನ ಹಾಗೂ ಜಿಲ್ಲಾ ಪಂಚಾಯತದಲ್ಲಿ ಶಿಲ್ಕು ಉಳಿದ ಅನುದಾನದಲ್ಲಿ ಮೇಲೆ ಓದಲಾದ (5) ಮತ್ತು (6) ರಲ್ಲಿ ಉಪ ನಿರ್ದೇಶಕರು, ಸಾರ್ವಜನಿಕ ಬೆಳಗಾವಿ ಹಾಗೂ ಚಿಕ್ಕೋಡಿ ಇವರು ಶೌಚಾಲಯಗಳ ಅವಶ್ಯವಿರುವ ಶಾಲೆಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದು ಸದರಿ ಬೇಡಿಕೆಯಂತೆ ಹಾಗೂ ಮೇಲೆ ಓದಲಾದ (7)ರಲ್ಲಿ 2014-15ರಲ್ಲಿ ಸರ್ಕಾರದಿಂದ ಅನುಮೋದಿತ ವಾರ್ಷಿಕ ಗುರಿಗನುಗುಣವಾಗಿ ಜಿಲ್ಲೆಯ ಒಟ್ಟು 439 ಶಾಲೆಗಳಿಗೆ ಶೌಚಾಲಯ ನಿರ್ಮಾಣ ಮಾಡಲು ಈ ಕೆಳಗಿನಂತೆ ನಿಬಂಧನೆಗಳಿಗೊಳಪಟ್ಟು ಅನುದಾನವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

## ಆದೇಶ

ಮೇಲ್ಕಾಣಿಸಿದ ಪ್ರಸ್ತಾವನೆಯಲ್ಲಿಯ ವಿಷಯವನ್ನು ಕುಲಂಕುಶವಾಗಿ ಪರಿಶೀಲಿಸಿ ಬೆಳಗಾವಿ ಜಿಲ್ಲೆಯ ಒಟ್ಟು 439 ಶಾಲೆಗಳಿಗೆ ಶಾಲಾ ಶೌಚಾಲಯಗಳನ್ನು ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿ ಹೆಚ್ಚುವರಿ ಶಾಲಾ ಶೌಚಾಲಯಗಳನ್ನು ನಿರ್ಮಿಸಿ ಅನುಷ್ಠಾನಗೊಳಿಸಲು ಈ ಕೆಳಗಿನ ಪ್ರಕಾರ ಬೇಡಿಕೆ ಇರುವ ವಲಯಗಳಿಗೆ ಅನುದಾನ ಬಿಡುಗಡೆ ಮಾಡಿದೆ.

| ಅ.ನಂ | ತಾಲೂಕ | ಶಾಲಾ ಶೌಚಾಲಯ ರೂ 35,000/-ರಂತೆ | | ಅನುಷ್ಠಾನಾಧಿಕಾರಿ |
|---|---|---|---|---|
| | | ಭೌತಿಕ: ಈಗ ಅನುದಾನ ಬಿಡುಗಡೆ ಮಾಡಿದ ಶಾಲೆಗಳ ಸಂಖ್ಯೆ | ಆರ್ಥಿಕ (ರೂ. ಲಕ್ಷಗಳಲ್ಲಿ) | |
| 1 | 2 | 3 | 4 | 5 |
| 1) | ಬೈಲಹೊಂಗಲ | 20 | 7.00 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೈಲಹೊಂಗಲ |
| 2) | ಸವದತ್ತಿ | 59 | 20.65 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಸವದತ್ತಿ |
| 3) | ಖಾನಾಪೂರ | 56 | 19.60 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಾನಾಪೂರ |
| 4) | ಕಿತ್ತೂರ | 15 | 5.25 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಿತ್ತೂರ |
| 5) | ರಾಮದುರ್ಗ | 97 | 33.95 | ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಮದುರ್ಗ |
| 6) | ಚಿಕ್ಕೋಡಿ | 27 | 9.45 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಚಿಕ್ಕೋಡಿ |
| 7) | ಮೂಡಲಗಿ | 75 | 26.25 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೂಡಲಗಿ |
| 8) | ರಾಯಬಾಗ | 27 | 9.45 | ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಯಬಾಗ |
| 9) | ಹುಕ್ಕೇರಿ | 33 | 11.55 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಕ್ಕೇರಿ |
| 10) | ಅಥಣಿ | 8 | 2.80 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಥಣಿ |
| 11) | ನಿಪ್ಪಾಣಿ | 22 | 7.70 | ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಪ್ಪಾಣಿ |
| | ಒಟ್ಟು | 439 | 153.65 | |

ನಿಬಂಧನೆಗಳು:

1. ನಿರ್ಮಲ ಭಾರತ ಅಭಿಯಾನ ಯೋಜನೆಯ ಮಾರ್ಗಸೂಚಿಯನ್ನು ಪಾಲಿಸಿ. ಬಿಡುಗಡೆ ಮಾಡಿದ ಅನುದಾನವನ್ನು ಈ ಯೋಜನೆಗೆ ವೆಚ್ಚ ಮಾಡಬೇಕು.
2. ಶಾಲಾ ಅಭಿವೃದ್ಧಿ ಮತ್ತು ವ್ಯವಸ್ಥಾಪಕ ಸಮಿತಿಯ ಮೂಲಕ ನೀರಿನ ವ್ಯವಸ್ಥೆಯೊಂದಿಗೆ ಬಾಲಕ, ಬಾಲಕೀಯರಿಗೆ ಪ್ರತ್ಯೇಕ ಶೌಚಾಲಯ ಮತ್ತು ಮೂತ್ರಾಲಯ ನಿರ್ಮಾಣ ಮಾಡಲು ಸೂಚಿಸುವುದು. ಅದಲ್ಲದೆ ಶಾಲಾ ವಿದ್ಯಾರ್ಥಿಗಳ ಸಂಖ್ಯೆ 125 ಕ್ಕೆ ಅನುಗುಣವಾಗಿ ಒಂದು ಘಟಕದಂತೆ ಶೌಚಾಲಯ ನಿರ್ಮಿಸಲು ಕ್ರಮ ವಹಿಸುವುದು. ಈ ಘಟಕದ ವೆಚ್ಚ ರೂ. 35000/- ರ ಮಿತಿಯೊಳಗಿರತಕ್ಕದ್ದು.
3. ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳುವಾಗ ಶಾಲಾ ಶಿಕ್ಷಕರು, ಪಂಚಾಯತ ಅಭಿವೃದ್ಧಿ ಅಧಿಕಾರಿ, ಕಿರಿಯ ಅಭಿಯಂತರರು ಮತ್ತು ಗ್ರಾಮ ಪಂಚಾಯತಿಯವರು ಸಮಾಲೋಚಿಸಿ ಆಯಾ ಸಮಿತಿಗಳು ಕಾರ್ಯನಿರ್ವಹಿಸತಕ್ಕದ್ದು. ಶಾಲಾ ಶೌಚಾಲಯಗಳನ್ನು ಎಸ್.ಡಿ.ಎಂ.ಸಿ. ಮೂಲಕ ನಿಗದಿತ ನಕ್ಷೆಯಂತೆ ನಿರ್ಮಾಣ ಮಾಡಿಸುವುದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿ ಇರುತ್ತದೆ.
4. ಶೌಚಾಲಯಗಳ ಗುಣಮಟ್ಟ ಹಾಗೂ ವ್ಯವಸ್ಥೆ ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳತಕ್ಕದ್ದು. ಚಾಲ್ತಿ ಪಾರದರ್ಶಕ ನಿಯಮಗಳನ್ನು ಪಾಲಿಸತಕ್ಕದ್ದು.
5. ಯಾವುದೇ ಕಾಮಗಾರಿ ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದು.
6. ಶಾಲಾ ಶೌಚಾಲಯಗಳಿಗೆ **ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ನಿರ್ಮಿಸಿದ ಬಗ್ಗೆ ನಾಮ ಫಲಕವನ್ನು ಬರೆಯಿಸತಕ್ಕದ್ದು.**
7. ಈ ಅನುದಾನದ ಬಳಕೆಯನ್ನು ನಿರ್ಮಲ ಭಾರತ ಅಭಿಯಾನ ಯೋಜನೆಯ ಮಾರ್ಗದರ್ಶಿ ಸೂತ್ರಗಳಡಿ ತಿಳಿಸಲಾಗಿರುವ ನಿಬಂಧನೆ ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶ / ಸೂಚನೆಗಳನ್ವಯ ಭರಿಸತಕ್ಕದ್ದು.
8. ಈ ಆದೇಶದಡಿ ಬಿಡುಗಡೆಗೊಳಿಸಿದ ಅನುದಾನವನ್ನು ಬಿಡುಗಡೆಗೊಳಿಸಿದ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
9. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮಗಳನ್ನು ಪಾಲಿಸತಕ್ಕದ್ದು.
10. ಈ ಯೋಜನೆಗೆ ಸಂಬಂಧಿಸಿದಂತೆ ಖರ್ಚುವೆಚ್ಚಗಳನ್ನು ಪ್ರತ್ಯೇಕವಾಗಿ ಇಡತಕ್ಕದ್ದು.
11. ಈಗ ಬಿಡುಗಡೆ ಮಾಡುತ್ತಿರುವ ಹೆಚ್ಚುವರಿ ಶಾಲಾ ಶೌಚಾಲಯಗಳ ನಿರ್ಮಾಣ ಕಾಮಗಾರಿಯನ್ನು ಅಗಷ್ಟ-2014 ರ ಅಂತ್ಯಕ್ಕೆ ಪೂರ್ಣಗೊಳಿಸಿ ವರದಿ ಸಲ್ಲಿಸತಕ್ಕದ್ದು.
12. ಹಣಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾ ಪಂಚಾಯತಿಗೆ ಸಲ್ಲಿಸತಕ್ಕದ್ದು.
13. ಪ್ರತಿ ತಿಂಗಳು 2 ನೇ ತಾರಿಖಿನೊಳಗೆ ಪ್ರಗತಿ ವರದಿ ಈ ಕಾರ್ಯಾಲಯಕ್ಕೆ ಸಲ್ಲಿಸುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರು ಮೇಲೆ ತೋರಿಸಿದ ಕಾಲಂ (4) ರಲ್ಲಿ ತೋರಿಸಿದ ಅನುದಾನವನ್ನು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಾದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಚಕ್ ಮುಖಾಂತರ ತಕ್ಷಣವೇ ಸಂದಾಯ ಮಾಡಲು ಆದೇಶಿಸಿದೆ.

(ದೀಪಾ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.

ಪ್ರತಿಯನ್ನು ಮಾಹಿತಿ ಕುರಿತು:-

1) ಮಾನ್ಯ ಮಿಷನ್ ನಿರ್ದೇಶಕರು, ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಕೆ.ಎಚ್.ಬಿ. ಕಟ್ಟಡ, ಕಾವೇರಿ ಭವನ, ಬೆಂಗಳೂರು ರವರಿಗೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ, ಬೆಳಗಾವಿ ಇವರಿಗೆ ಮಾಹಿತಿಗಾಗಿ.
2) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ/ಚಿಕ್ಕೋಡಿ.
3) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ______________ ಇವರಿಗೆ.
5) ಕ್ಷೇತ್ರ ಶಿಕ್ಷಣಾಧಿಕಾರಿಗಳು ______________________ವಲಯ ಇವರಿಗೆ.
6) ಜಿಲ್ಲಾ ಸಮಾಲೋಚಕರು, ನಿರ್ಮಲ ಭಾರತ ಅಭಿಯಾನ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯತ, ಬೆಳಗಾವಿ ಇವರುಗಳಿಗೆ ಕಳುಹಿಸುತ್ತಾ, ಬಿಡುಗಡೆಯಾದ ಅನುದಾನ ಸದ್ಬಳಕೆಯಾದ ಬಗ್ಗೆ ಕ್ಷೇತ್ರ ಬೇಟಿ ನೀಡಿ ಪರಿಶೀಲಿಸಿ ಪ್ರತಿ ತಿಂಗಳು ವರದಿ ಸಲ್ಲಿಸುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.